ಊಟ ಮಾಡುವಂತೆ ಹೇಳಿದರು.

'ನನ್ನ ಊಟವಾಗಿದೆ' ಎಂದರು ಅಪ್ಪ. ನಂತರ ಅವರು ಬಟ್ಟೆ ಬದಲಿಸಲು ಒಳಗೆ ಹೋದರು. ಅಮ್ಮ ಅಡುಗೆ ಮನೆಯ ದೀಪ ಆರಿಸಿ ನನ್ನ ಕೋಣೆಗೆ ಮಲಗಲು ಬಂದರು. ಕೆಲವು ದಿನಗಳಿಂದ ಅಮ್ಮ ಹೆಚ್ಚಾಗಿ ನನ್ನ ಕೋಣೆಗೇ ಬಂದು ನಿದ್ರಿಸುತ್ತಿದ್ದರು. ಈಚೆಗೆ ಅಮ್ಮ ಮತ್ತು ಅಪ್ಪ ಇಬ್ಬರ ನಡುವೆ ವಾದವಿವಾದ ಮತ್ತು ನಿಂದನೆ ಬೈಗುಳಗಳು ಹೆಚ್ಚಾಗಿದ್ದವು. ಆ ದಿನದ ನಂತರ ಮನೆಯಲ್ಲಿ ಶಾಂತಿ ಇರುವುದೆಂದು ಯೋಚಿಸಿದ್ದೆ, ಆದರೆ ಅದು ನನ್ನ ಭ್ರಮೆಯಾಗಿತ್ತು.

ಮರುದಿನ ಅದೇ ರೋದನ, ಅದೇ ಆರೋಪ ಪ್ರತ್ಯಾರೋಪ; ಅಪ್ಪ ಕಿಡಿ ಹೊತ್ತಿಸಿ ಮನೆಯಿಂದ ಹೊರಗೆ ಹೋಗುವುದು, ಅಮ್ಮ ರೋದಿಸುವುದು...

ನನಗೆ ಒಮ್ಮೊಮ್ಮೆ ಅಮ್ಮ ಏಕೆ ಸುಮ್ಮನಿರುವುದಿಲ್ಲ? ಅಪ್ಪ ಏನು ಮಾಡುವರೋ, ಮಾಡಲಿ ಎಂದು ಅನ್ನಿಸುತ್ತಿತ್ತು. ಅಮ್ಮ ಮತ್ತು ನಾನು ಪರಸ್ಪರ ಸಂತೋಷದಿಂದ ಇದ್ದೇವಲ್ಲ! ಅಮ್ಮನಿಗೆ ಇಷ್ಟು ಸಾಕಾಗುವುದಿಲ್ಲವೇ? ಅಮ್ಮ ಮತ್ತು ಅಪ್ಪ ಪರಸ್ಪರ ಜಗಳವಾಡಿದಾಗ, ಅವರ ಜಗಳ ಕೇಳಿ, ಅಪ್ಪಾ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಾರೆ, ಅಮ್ಮ ಎಂ.ಎ.ಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಯಾರೂ ಹೇಳಲು ಸಾಧ್ಯವಿರಲಿಲ್ಲ. ಇಬ್ಬರೂ ತರಕಾರಿ ಮಾರುವವರಂತೆ ಜಗಳವಾಡುತ್ತಿದ್ದರು. ಇಬ್ಬರ ನಡುವೆ ಹೊಡೆದಾಟ ಸಹ ನಡೆಯುತ್ತಿತ್ತು. ಅಮ್ಮ ಗುದ್ದಿದರೆ, ಅಪ್ಪಾ ಅಮ್ಮನ ಕಪಾಳಕ್ಕೆ ಹೊಡೆಯುತ್ತಿದ್ದರು; ಒಮ್ಮೊಮ್ಮೆ ಅವಳ ತಲೆಕೂದಲುಗಳನ್ನು ಹಿಡಿದು ಎಳೆಯುತ್ತಿದ್ದರು. ಆ ದೃಶ್ಯ ನನಗೆ ಭಯಾನಕವಾಗಿತ್ತು.

(ಸಶೇಷ)

## ಪ್ರತಿಕ್ರಿಯೆ




### ದೃಶ್ಯವೈಭವ ಅದ್ಭುತ

ನೆಲಗನ್ನಡ ಮಹಾಭಾರತ (ಹಾಡುಪಾಡು ರಾಮು) ಧಾರಾವಾಹಿಯಲ್ಲಿ ದೃಶ್ಯಗಳನ್ನು ಅದ್ಭುತವಾಗಿ ನಮ್ಮ ಕಣ್ಣಮುಂದೆ ಕಟ್ಟಿಕೊಟ್ಟರು. ಕಲಾವಿದ ಮೋನಪ್ಪ ಅವರಿಗೆ ಧನ್ಯವಾದಗಳು. ಚಿಕ್ಕ ಚೊಕ್ಕವಾಗಿ ಇಡೀ ಮಹಾಭಾರತ ಗ್ರಂಥವನ್ನು ಕೆಲವೇ ಕಂತುಗಳಲ್ಲಿ ದೃಶ್ಯವೈಭವ, ಭಾಷಾ ವೈಖರಿ, ಪಾತ್ರಗಳ ಸ್ವಗತ, ಅರ್ಥಪೂರ್ಣ ಸನ್ನಿವೇಶದ ಮೂಲಕ ಮನಸಿನಾಳಕ್ಕೆ ಇಳಿದು ಯೋಚಿಸುವಂತೆ ಮಾಡಿತು. ಧರ್ಮವನ್ನು ಬಿಡದೆ ರಾಜ್ಯ ಪಡೆದರು, ಎಲ್ಲವನ್ನು ತೊರೆದು ಸ್ವರ್ಗಾರೋಹಣ ಮಾಡುವ ಪಾಂಡವರ ಅಂತಿಮ ಯಾತ್ರೆಯ ಸನ್ನಿವೇಶಗಳು ಉಸಿರು ಬಿಗಿ ಹಿಡಿಯುವಂತೆ ಮಾಡಿತು.

—ಭಾರತೀ ಗಂಗಾಧರ್, ಬೆಂಗಳೂರು

### ವಿಭಿನ್ನ ನಿರೂಪಣೆ

ತುಂಬ ವಿಶೇಷವಾದ ಧಾರಾವಾಹಿ. ಮೂಲ ಮಹಾಭಾರತದ ಕಥೆಗೆ ಧಕ್ಕೆ ಆಗದಂತೆ, ವಿನೂತನ ಶೈಲಿಯಲ್ಲಿ ಬರೆದಿದ್ದಾರೆ. ಮಹಾಭಾರತವನ್ನು ಬೇರೆ ಬೇರೆ ಕವಿಗಳು ತಮ್ಮದೇ ರೀತಿಯಲ್ಲಿ ರಚಿಸಿದ್ದಾರೆ. ಇವುಗಳ ನಡುವೆ ಹಾಡುಪಾಡು ರಾಮು ಅವರ ಈ ಕೃತಿ ತನ್ನದೇ ಆದ ನಿರೂಪಣೆಯಿಂದ ಬೇರೆಯದೇ ಅನುಭವ ಕೊಡುತ್ತದೆ. ಬರೀ ಎಂಟು ಕಂತಿನಲ್ಲಿ ಮುಗಿದಿದ್ದು ಬೇಸರ ಆಯಿತು.

—ರಾಜೇಂದ್ರ, ಬೆಂಗಳೂರು

### ಭಾವನಾತ್ಮಕ ವಿವರಣೆ

ಯುದ್ಧಭೂಮಿಯಲ್ಲಿ ಗಾಂಧಾರಿ ಕೃಷ್ಣೆಗೆ 'ನಾನೂ ನೀನೂ ಈಗ ಒಂದೇನೇ. ನಮಗೆ ಯಾರಿದ್ದಾರೆ ಎಂಬ ಸಂಭಾಷಣೆ ಓದಿ ಸಂಕಟದಿಂದ ಕಣ್ಣೀರು ಸುರಿಯಿತು. ಅಬ್ಬಾ ಏನು ವಿವರಣೆ. ವಾಸ್ತವಕ್ಕೆ ಅತಿ ಸಮೀಪದ ವೀಕ್ಷಕ ವಿವರಣೆಯಂತೆ ಭಾಸವಾಯಿತು. ಹಲವಾರು ಆಯಾಮದ ಮಹಾಭಾರತವನ್ನು ಓದಿದ್ದೇವೆ. ಇದು ನಮ್ಮ ನೆಲಗನ್ನಡಕ್ಕೆ ಒಗ್ಗಿಸಿದ, ಎಲ್ಲರ ದೃಷ್ಟಿಯಿಂದ ಕೆಟ್ಟವರೆನಿಸಿಕೊಂಡವರ ಮನದ ಭಾವನೆಗಳ ವಿವಿಧ ಕೋನಗಳು ಎಷ್ಟು ನಿರಾಳತೆಯಿಂದ ಹೊರಹೊಮ್ಮಿದವು. ಗಾಂಧಾರಿಯ ಯುದ್ಧ ಭೂಮಿಯ ವೀಕ್ಷಣೆ, ಆ ತಾಯಿಯ ದುಃಖ ಪ್ರಲಾಪಗಳಂತೂ ಅಸೀಮವಾಗಿದ್ದವು. ದುಃಖ ಮಡುಗಟ್ಟಿ ಕೊಂಚ ಸಮಯ ಸ್ತಬ್ಧವಾದಂತೆನಿಸಿತು. ಹಾಡುಪಾಡು ರಾಮು ಅವರ ಕೃತಿಯನ್ನು ನಾನು ಓದಿದ್ದು ಇದೇ ಮೊದಲು.

—ಸಿ.ಆರ್. ಚಂಪಾ, ಬೆಂಗಳೂರು

### ಮತ್ತೆ ಮತ್ತೆ ಓದಬೇಕೆನಿಸಿತು

ಮೊದಲಿಗೆ ಈ ಕೃತಿಯ ಲೇಖಕ ಹಾಡುಪಾಡು ರಾಮು, ಈ ಸಂಕಥನಕ್ಕೆ ಸ್ಪಷ್ಟರೂಪ ಕೊಟ್ಟ ದೇವನೂರ ಮಹಾದೇವ ಮತ್ತು ಈ ಕೃತಿಯನ್ನು ಓದುಗರಿಗೆ ಉಣಬಡಿಸಿದ 'ಸುಧಾ' ಎಲ್ಲರಿಗೂ ಧನ್ಯವಾದಗಳು. ಮಹಾಭಾರತದ ಕಥೆ ನಮಗೆಲ್ಲರಿಗೂ ಚಿರಪರಿಚಿತವಾದದ್ದೇ. ಅದನ್ನು ಕಾವ್ಯವಾಗಿ, ಕಥೆಯಾಗಿ ಓದುವುದಕ್ಕೂ, ಅದರಲ್ಲಿನ ಕೆಲವು ಪ್ರಸಂಗಗಳನ್ನು ಪ್ರತ್ಯೇಕವಾಗಿ ಅವಲೋಕಿಸುವುದಕ್ಕೂ ತುಂಬಾ ವ್ಯತ್ಯಾಸವಿದೆ. ಈ ಕೃತಿಯ ವಿಶಿಷ್ಟತೆ ಅದೇ.

ಇಲ್ಲಿ ಲೇಖಕರು ಮಹಾಭಾರತದಿಂದ ಒಂದಿಷ್ಟು ಆಯ್ದ ಪ್ರಸಂಗಗಳ ಮೇಲೆ ಬೆಳಕು ಚೆಲ್ಲಲು ಮಾಡಿರುವ ಪ್ರಯತ್ನ ಸ್ತುತ್ಯರ್ಹ. ಪ್ರತಿ ಪ್ರಸಂಗದಲ್ಲೂ ಆಯಾ ವ್ಯಕ್ತಿಗಳ ಮನದ ತೊಳಲಾಟ, ವೈವಿಧ್ಯಮಯ ಭಾವನೆಗಳಿಗೆ ಕನ್ನಡಿ ಹಿಡಿಯುವಂತೆ, ಸೊಗಸಾದ ಸಂಭಾಷಣೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಪಾಂಡುವಿನ ಮರಣಾನಂತರ ಕುಂತಿ ಮಾದ್ರಿಯರ ಸಂವಾದ, ಯುದ್ಧಭೂಮಿಯಲ್ಲಿ ಭೀಷ್ಮ ಯುಧಿಷ್ಠಿರರ ಸಂವಾದ, ಶರಶಯ್ಯೆಯಲ್ಲಿರುವ ಭೀಷ್ಮ ಕರ್ಣರ ಸಂವಾದ ಹೀಗೆ ಯಾವ ಭಾಗವನ್ನು ತೆಗೆದುಕೊಂಡರೂ ಹೃದಯಸ್ಪರ್ಶಿಯಾದ ಸಂಭಾಷಣೆ, ಆಯಾಯಾ ಸಂಬಂಧಗಳ ಒಳಗನ್ನು ಬಗೆದು ತೋರಿಸುತ್ತದೆ. ಕೃಪನಿಗೆ ದುರ್ಯೋಧನ ಕೊಡುವ ಉತ್ತರದಲ್ಲಿ ತಾನು ಮಾಡಿದ ಅವಿವೇಕದ ಪರಾಮರ್ಶೆ ಕಂಡರೂ, ಆ ದಾರಿಯಲ್ಲಿ ಹಿಂತಿರುಗಿ ಬಾರದಷ್ಟು ದೂರ ಹೊರಟು ಹೋದವನು ಮತ್ತೆ ಬರಲಾರ. ಕಲಿಯುಗದ ಮುನ್ನುಡಿಯಂತಿರುವ ಈ ಪ್ರಸಂಗಗಳ ಅಚ್ಚುಕಟ್ಟಾದ ನಿರೂಪಣೆ, ಪ್ರತಿಯೊಂದು ಸಂಚಿಕೆಯನ್ನೂ ಮತ್ತೆ ಮತ್ತೆ ಓದಬೇಕೆನಿಸುವಂತೆ ಮಾಡಿದೆ.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

### ಮಹಾಭಾರತ ಪಾತ್ರಧಾರಿಗಳು ಈಗಲೂ ಇದ್ದಾರೆ!

ಧಾರಾವಾಹಿ ಅತ್ಯುತ್ತಮವಾಗಿ ಮೂಡಿಬಂತು. ಮಹಾಭಾರತದಲ್ಲಿ ಮೂಡಿಬರುವ ಧೃತರಾಷ್ಟ್ರ, ಗಾಂಧಾರಿ, ಶಕುನಿ, ದುರ್ಯೋಧನ ಮತ್ತು ಕರ್ಣ ಪಾತ್ರಧಾರಿಗಳು, ಈ ಕಲಿಯುಗದಲ್ಲಿಯೂ ಸಹ ಇದ್ದಾರೆ. ಈ ನಮ್ಮ ರಾಜಕೀಯದಲ್ಲಿ ಸಹ ಇವರು ಕಾಣಿಸುತ್ತಿದ್ದಾರೆ. ಒಂಟಿಯಾಗಿ ಬಂದಿರುತ್ತೇವೆ, ಒಂಟಿಯಾಗಿ ಹೋಗುತ್ತೇವೆಯೆಂಬುದಕ್ಕೆ ಅಂತ್ಯದಲ್ಲಿ ನಾವು ಕಾಣಬಹುದು. ಒಟ್ಟಿನಲ್ಲಿ ಈ ಧಾರಾವಾಹಿಯನ್ನು ಸಂಕ್ಷಿಪ್ತವಾಗಿ ಮುಗಿಸಿರುವುದಕ್ಕೆ ಬೇಸರವಾಗುತ್ತದೆ.

—ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

### ಕಥೆ, ಕಲೆ ಎರಡೂ ಚೆನ್ನಾಗಿವೆ

ನೆಲಗನ್ನಡ ಮಹಾಭಾರತ ಉತ್ತಮ ಕಥಾ ಹಂದರ. ಕಲಾವಿದ ಎಚ್.ಎಸ್. ಮೋನಪ್ಪ ಅವರ ಕಲೆ ಜೊತೆಗೂಡಿ ಇನ್ನಷ್ಟು ಸೊಗಸಾಗಿದೆ. ಗೊತ್ತಿರುವ ಕಥೆಯಾದರೂ ಇನ್ನೊಂದು ಮಜಲಿನಲ್ಲಿ ನೋಡುವ ಅವಕಾಶ ಸಿಕ್ಕಿದಂತಾಗಿದೆ. ಯುದ್ಧದ ನಂತರ ಗಾಂಧಾರಿ ಮತ್ತು ಕೃಷ್ಣೆಗೆ ನಾನೂ ನೀನೂ ಈಗ ಒಂದೇನೇ, ಹೆಣ್ಣಿನ ವೇದನೆ ಹೆಣ್ಣಿಗೆ ಮಾತ್ರ ಅರ್ಥವಾಗುವುದು ಎನ್ನುವುದನ್ನು ಸೂಕ್ಷ್ಮವಾಗಿ ಮನಮುಟ್ಟುವಂತಿದೆ. ಯುದ್ಧದ ಭಯಾನಕ ದೃಶ್ಯಗಳು ಚಿತ್ರ ಕಲೆಯೊಂದಿಗೆ ಸೇರಿ ಕಣ್ಣಿಗೆ ಕಟ್ಟಿದಂತೆ ಬಿಂಬಿತವಾಗಿವೆ.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ